ಶ್ರೀ ಡಿ.ಬಿ. ಚಂದ್ರೇಗೌಡ.—ಮಾನ್ಯ ಸಚಿವರು ಬರೀ ತಲೆ ಆಡಿಸಿದರೆ ಆಗುವುದಿಲ್ಲ. ಬಾಯಲ್ಲಿ ಉತ್ತರ ಹೇಳಬೇಕು. ಹೌದು ಮಾಡುತ್ತೇವೆ ಎಂದು ಹೇಳಬೇಕು.

MR. SPEAKER.—I uphold the objection taken by the leader of the Opposition that the sign language do not form part of the proceedings.

ಶ್ರೀಮತಿ ಪುನೊ ರಮಾ ಮದ್ಧ್ವರಾಜ್.—ನಾನು ಬೊಂಬಾಯಿಗೆ ಹೋದಾಗ ಈ ಬಗ್ಗೆ ಅಲ್ಲಿನ ಆರೋಗ್ಯ ಸಚಿವರ ಹತ್ತಿರ ಮಾತನಾಡುತ್ತೇನೆ.

(ಗೊಂದಲ)

ಶ್ರೀ ಹರ್ಷ ಕುಮಾರಗೌಡ.—ಮೈಸೂರು ಕೆ.ಆರ್. ಆಸ್ಪತ್ರೆಯಲ್ಲಿ ಅಂಬ್ಯುಲೆನ್ಸೇ ಇಲ್ಲ.

ಅಧ್ಯಕ್ಷರು.—ಬಹಳ ಕಡೆ ಅದು ಇಲ್ಲ.

ಶ್ರೀ ಪಾಟೀಳ್ ನಾಗರಾಜ್.—ಕೆ.ಆರ್. ಆಸ್ಪತ್ರೆ ಎನ್ನುವುದು ಬಂದು ನರಕ. ಅದಕ್ಕೆ ಬಹಳ ಕಾಯಕಲ್ಪ ಮಾಡಬೇಕು. ಮಾನ್ಯ ಸಚಿವರೇ ಅಲ್ಲಿಗೆ ಹೋಗಿ ಮೂಗು ಮುಚ್ಚಿಕೊಂಡು ಬಂದಿರುವುದು ಪತ್ರಿಕೆಯಲ್ಲಿ ಬಂದಿದೆ.

ಅಧ್ಯಕ್ಷರು.—ತಾವು ನೋಟೀಸ್ ಕೊಡಿ.

ಶ್ರೀ ಹರ್ಷ ಕುಮಾರಗೌಡ.—ಒಂದು ವಿಚಾರ ಹೇಳುತ್ತೇನೆ. ಹೋದವಾರ ಮೈಸೂರಿನಲ್ಲಿ ಒಂದು ಅಪಘಾತವಾಯಿತು. ಆ ಯುವಕನನ್ನು ಆಸ್ಪತ್ರೆಗೆ ಒಯ್ಯುವುದರೊಳಗಾಗಿ ಆತ ಸತ್ತು ಹೋದ. ಅಲ್ಲಿ ಡಯಾಲಿಸಿಸ್ ಯೂನಿಟ್ ಇದ್ದರೂ ಅದು ಕೆಲಸ ಮಾಡುತ್ತಿಲ್ಲ. ಎಕ್ಸ್‌ರೇ ಯೂನಿಟ್ಸ್ ನಾಲ್ಕು ಇದ್ದರೂ ಒಂದೇ ವರ್ಕ್ ಆಗುತ್ತಿರುವುದು. ಇಂತಹ ಅವ್ಯವಸ್ಥೆಗೆ ಕಾರಣವೇನೆಂದು ಮಾನ್ಯ

11-30 A.M.

ಸಚಿವರು ಉತ್ತರ ಕೊಡಬೇಕು. ಮತ್ತೆ ಈ ರೀತಿಯ ಅವ್ಯವಸ್ಥೆಯನ್ನು ಸರಿಪಡಿಸಬೇಕು ಎಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ವೆಂಕಟೇಶ್.—ಅಲ್ಲಿ ಎಕ್ಸ್‌ರೇ ಫಿಲಂಗಳು ಇಲ್ಲ ಎಂದು ಹೇಳುತ್ತಾರೆ.

ಅಧ್ಯಕ್ಷರು.—ತಾವು ನೋಟೀಸ್ ಕೊಡಿ.

ಗಮನ ಸೆಳೆಯುವ ಸೂಚನೆಗಳು

ಮಂಚನಬೆಲೆ ಯೋಜನೆಯಲ್ಲಿ ಮುಳುಗಡೆಯಾದ ಜಮೀನಿನ ರೈತರಿಗೆ ಪರಿಹಾರ ಧನ ಹಾಗೂ ಪುನರ್‌ವಸತಿ ಸೌಲಭ್ಯ

ಶ್ರೀ ಎಚ್.ಎಂ. ರೇವಣ್ಣ. ಮಾನ್ಯ ಅಧ್ಯಕ್ಷರೇ, ನಾಗಡಿ ತಾಲ್ಲೂಕಿನ ಮಂಚನಬೆಲೆ ಯೋಜನೆಯಲ್ಲಿ ಮುಳುಗಡೆಯಾದ ಜಮೀನಿನ ರೈತರಿಗೆ ಇದುವರೆವಿಗೂ ಪರಿಹಾರ ಧನ ಹಾಗೂ ಪುನರ್ ವಸತಿ ಸೌಲಭ್ಯಗಳನ್ನು ಕಲ್ಪಿಸದಿರುವುದರಿಂದ ಅಲ್ಲಿನ ರೈತಾಪಿ ಜನರಿಗೆ ಉಂಟಾಗುತ್ತಿರುವ ತೊಂದರೆ ಬಗ್ಗೆ ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಮಾನ್ಯ ಲೋಕೋಪಯೋಗಿ ಮಂತ್ರಿಗಳು). ಮಾನ್ಯ ಅಧ್ಯಕ್ಷರೇ,

ಮಂಚನಬೆಲೆ ಯೋಜನೆ ಆಣೆಕಟ್ಟೆಯಿಂದ ಸುಮಾರು ೩೬೫ ಹೆಕ್ಟೇರ್ ಭೂಮಿ ಮತ್ತು ಅವೇರಾಹಳ್ಳಿ ವಾಡಹಳ್ಳಿ ಮತ್ತು ವೀರಾಪುರ ಎಂಬ ಮೂರು ಗ್ರಾಮಗಳು ಮುಳುಗಡೆಯಾಗಿರುತ್ತದೆ. ಈ ೩೬೫ ಹೆಕ್ಟೇರ್ ಭೂಮಿಯಲ್ಲಿ ೧೧೭ ಹೆಕ್ಟೇರ್ ಕಾಡಿನ ಪ್ರದೇಶವಾಗಿದ್ದು ಉಳಿದ ೨೪೮ ಹೆಕ್ಟೇರ್ ಭೂ ಪ್ರದೇಶವು ತೋಟ ಮತ್ತು ಒಣ ಭೂಮಿಯಾಗಿರುತ್ತದೆ. ಮುಳುಗಡೆಯಾದ ಅವೇರಾಹಳ್ಳಿ ಮತ್ತು ವೀರಾಪುರ ಗ್ರಾಮಸ್ಥರನ್ನು ಅವೇರಾಹಳ್ಳಿಯ ಪಶ್ಚಿಮ ಪ್ರದೇಶವಾದ ಕೋಲೂರು, ಪರ್ತೂರು ಮತ್ತು ಕಡಬಗೆರೆ ಗ್ರಾಮಗಳಿಗೆ ಸ್ಥಳಾಂತರಿಸಲಾಗಿದೆ. ಇವರುಗಳಿಗೆ ಮನೆ ನಿವೇಶನ, ಪ್ರತಿಯೊಂದು

ಭೂಮಿ ಮುಂತಾದ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಪಾಡಹಳ್ಳಿ ಗ್ರಾಮವನ್ನು ಜೋಳನಾಯಕನ ಹಳ್ಳಿಯ ಸಮೀಪದಲ್ಲಿ ವ್ಯವಸಾಯಕ್ಕಾಗಿ ಜಮೀನುಗಳ ಸೌಕರ್ಯ ಮಾಡಿಕೊಟ್ಟು, ಸರ್ವೆ ನಂ ೫೮ರಲ್ಲಿ ಕಾಲೋನಿ ನಿರ್ಮಿಸಿ ಸ್ಥಳಾಂತರಿಸಲು ಕಾಲೋನಿ ನಿರ್ಮಿಸುವ ಕೆಲಸಗಳನ್ನು ತೆಗೆದುಕೊಳ್ಳಲಾಗಿತ್ತು. ಆದರೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುವುದರಿಂದ ಈ ಕೆಲಸ ಸಾಧ್ಯವಾಗುವುದಿಲ್ಲ. ಆದರೂ ಪಾಡಹಳ್ಳಿಯ ನಿರ್ವಸಿತರಿಗೆ ಜೋಳನಾಯಕನಹಳ್ಳಿಯ ಸಮೀಪದಲ್ಲಿ ತಾತ್ಕಾಲಿಕ ಟ್ರಾನ್ಸಿಟ್ ಶೆಡ್ಡು ಗಳನ್ನು ನಿರ್ಮಿಸಿ ಸ್ಥಳಾಂತರಿಸಲಾಗಿದೆ.

ಈ ಬಗ್ಗೆ ೨೪–೨–೯೦ರಂದು ಸರ್ಕಾರದ ಮಟ್ಟದಲ್ಲಿ ನೀರಾವರಿ ಮತ್ತು ಲೋಕೋಪಯೋಗಿ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆದು, ರೈತರ ಬೇಡಿಕೆಯಂತೆ ಕೈಕೊಂಡ ಕ್ರಮ ತೆಗೆದುಕೊಳ್ಳಲು ನಿರ್ಧರಿಸಲಾಯಿತು.

೧) ೧೯೮೧ ಪ್ರವಾಹದಲ್ಲಿ ಹಾನಿಗೊಂಡ ಬೆಳೆಗಳಿಗೆ ಪರಿಹಾರವನ್ನು ಕೊಡುವುದು.

೨) ಅವೇರಹಳ್ಳಿ ಜನಗಳಿಗೆ ಭೂಪರಿಹಾರ ಕೊಟ್ಟ ವರದಲ್ಲಿಯೇ ಪಾಡಹಳ್ಳಿ ಭೂಮಿ ಗಳಿಗೂ ಪರಿಹಾರ ಕೊಡುವುದು.

೩) ಗ್ರಾಮಾಭಿವೃದ್ಧಿ ಯೋಜನೆ ಮತ್ತು ಪ್ರಾಯೋಜಿತ ರಾಜ ಇಲಾಖೆಯಡಿಯಲ್ಲಿ ಗ್ರೂಪ್ ಹೌಸಿಂಗ್ ಕಾರ್ಯಕ್ರಮದಲ್ಲಿ ಮನೆಗಳನ್ನು ಕಟ್ಟಿಕೊಡುವ ಬಗ್ಗೆ ಪರಿಶೀಲಿಸುವುದು.

೪) ಭೂ ಸ್ವಾಧೀನ ದಿನಾಂಕವನ್ನು ಪರಿಗಣಿಸಿ ನಿಧಾನವಾದ ಭೂ ಪರಿಹಾರದ ಮೊಬಲಗಿಗೆ ಬಡ್ಡಿ ಕೊಡುವುದು.

ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಪಾಡಹಳ್ಳಿ ಗ್ರಾಮಸ್ಥರ ಜಮೀನಿನಲ್ಲಿ ೧೯೮೧ನೇ ಸಾಲಿನಲ್ಲಿ ಬೆಳೆದಿದ್ದ ಬೆಳೆಯೂ ಪ್ರವಾಹದಿಂದ ಹಾನಿಯಾದ ಪ್ರಯುಕ್ತ ರೂ. ೫೫,೫೮೦ ಪರಿಹಾರವಾಗಿ ರೈತರಿಗೆ ಪಾವತಿ ಮಾಡಲಾಗಿದೆ: ಆಣೆಕಟ್ಟೆಯ ನಿರ್ಮಾಣಕ್ಕಾಗಿ ಮಣ್ಣನ್ನು ತೆಗೆದುಕೊಳ್ಳುವಾಗ ಜಮೀನಿನಲ್ಲಿದ್ದ ಬೆಳೆಯು ನಾಶವಾಗಿದ್ದಕ್ಕಾಗಿ ರೂ. ೨೯,೭೫೦ನ್ನು ಬೆಳೆ ಪರಿಹಾರದ ಸಲುವಾಗಿ ರೈತರಿಗೆ ಪಾವತಿ ಮಾಡಲಾಗಿದೆ,

ಪಾಡಹಳ್ಳಿಯಲ್ಲಿ ಬಾಕಿ ಉಳಿದ ಕುಟುಂಬಗಳನ್ನು ಸ್ಥಳಾಂತರಿಸಲು ಎಲ್ಲಾ ರೀತಿಯ ಪ್ರಯತ್ನ ಗಳನ್ನು ಮಾಡಲಾಗುತ್ತಿದೆ.

೧೦.೫೦. ಎ.ಎಂ.

† ಶ್ರೀ ಹೆಚ್.ಎಂ. ರೇವಣ್ಣ. ಮಾನ್ಯ ಅಧ್ಯಕ್ಷರೇ, ಹಿಂದೆ ಪ್ರಾರಂಭವಾದ ಈ ಜಲಾಶಯದ ಕಾರ್ಯ ಇನ್ನೂ ಪೂರ್ಣಗೊಂಡಿಲ್ಲ. ಆದರೂ ಕೂಡಾ ಅಲ್ಲಿರತಕ್ಕಂಥ ರೈತರನ್ನು ನಾಲ್ಕು ಜಾಗಗಳಿಗೆ ಸ್ಥಳಾಂತರಿಸಲಾಗಿದೆ. ಕಡಬಗೆರೆ, ಮೇಟುಪಾಳ್ಯ, ಸೋಲೂರು, ಜೋಳನಾಯಕನಹಳ್ಳಿ ಈ ರೀತಿ ನಾಲ್ಕು ಸ್ಥಳಗಳಿಗೆ ಅವರನ್ನು ಸ್ಥಳಾಂತರಿಸಲಾಯಿತು. ಅವರುಗಳಿಗೆ ಹಾಕಿಕೊಟ್ಟಿರತಕ್ಕಂಥ ಷೆಡ್ಡು ಗಳಲ್ಲಿ ಜನರು ಮಾತ್ರ ಇರುವುದಕ್ಕಾಗುವುದಿಲ್ಲ. ಅಲ್ಲಿ ದನಕರುಗಳು ಕೂಡ ಇರುವುದಕ್ಕಾಗುವುದಿಲ್ಲ. ೧೯೮೮ನೇ ಇಸವಿಯಲ್ಲಿ ಅಂದಿನ ಲೋಕೋಪಯೋಗಿ ಮಂತ್ರಿಗಳ ನೇತೃತ್ವದಲ್ಲಿ ನಾವು ಒಂದು ಮೀಟಿಂಗನ್ನು ಮಾಡಿದಾಗ ಇದನ್ನು ಪರಿಶೀಲಿಸಲಾಗುತ್ತದೆ, ಇದನ್ನು ಮಾಡಿಕೊಡುತ್ತೇವೆ ಎನ್ನುವ ಉತ್ತರವನ್ನು ಕೊಟ್ಟಿದ್ದರು. ಇವತ್ತಿಗೂ ಕೂಡ ಇನ್ನೂ ಅವರಿಗೆ ಗ್ರೂಪ್ ಹೌಸಿಂಗ್ ಮಾಡಿ ಕೊಡುವ ಬಗ್ಗೆ ಪರಿಶೀಲನೆಯಲ್ಲಿದೆಯೇ ಹೊರತು ಅವರಿಗೆ ಮನೆಗಳನ್ನು ಕಟ್ಟಿಕೊಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಜೊತೆಗೆ ಜೋಳನಾಯಕನಹಳ್ಳಿಯಲ್ಲಿರತಕ್ಕಂಥ ರೈತರಿಗೆ ಜಾಗ ಬಿಡುತ್ತಿಲ್ಲ. ಈ ಸ್ಥಳದ ವಿಚಾರ ಹೈಕೋರ್ಟಿನಲ್ಲಿದೆ ಎಂದು ಹೇಳುತ್ತಾರೆ. ಅನೇಕ ಸಾರಿ ಸರ್ಕಾರವನ್ನು ಕೇಳಿಕೊಂಡರೂ ಕೂಡ ಇದೇ ಉತ್ತರ ಬರುತ್ತಾ ಇದೆ. ಇಪ್ಪತ್ತು ವರ್ಷಗಳಿಂದ ಅವರು ನಿರ್ಗತಿಕರಾಗಿ ಅಂಥ ಪರಿಸ್ಥಿತಿಗೆ ಬಂದಿದ್ದಾರೆ. ಯಾವುದೇ ಒಂದು ನಿರ್ದಿಷ್ಟವಾದ ಉತ್ತರವನ್ನು ಮಾನ್ಯ ಮಂತ್ರಿ ಗಳು ನೀಡಿಲ್ಲ. ಸರ್ಕಾರದವರು ಈಗಲಾದರೂ ಈ ಒಂದು ಗ್ರಾಮದ ರೈತರಿಗೆ ನ್ಯಾಯ

† ಈ ಚಿಸ್ನೆ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ದೊರಕಿಸಿಕೊಡಬೇಕು. ಪ್ರತ್ಯಾಸವಾಗಿರತಕ್ಕಂಥ ಹಣವನ್ನು ಕೊಡುವುದಕ್ಕೆ ತೊಂದರೆಯೇನೂ ಇಲ್ಲ. ಅಪರ ಜಮೀನಾನ್ನು ಎಕರೆಗೆ ಎರಡು ಸಾವಿರ ರೂಪಾಯಿಯಂತೆ ತೆಗೆದುಕೊಂಡಿರುವುದನ್ನು ಹೆಚ್ಚಿಸುತ್ತೇವೆ ಎಂದು ಹೇಳಿದ್ದೀರಿ. ಆದರೆ ಇದುವರೆಗೂ ಅದನ್ನು ಕೂಡ ಮಾಡಲಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ನಮ್ಮ ಮಾನ್ಯ ಸಚಿವರೂ ಹೇಳಿದರು. ಇದುವರೆಗೂ ಕೂಡ ಯಾವುದೇ ಒಂದು ಕಾರ್ಯ ಆಗಿಲ್ಲ. ಆ ಬಾರಿಯಾದರೂ ಕೂಡ ಆ ರೈತರಿಗೆ ಸಹಾಯವಾಗುವ ಹಾಗೆ ಸನ್ಮಾನ್ಯ ಸಚಿವರು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಅವರಿಗೆ ಸಹಾಯವನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಈ ಸಮಸ್ಯೆಗಳನ್ನು ಪರಿಹರಿಸಲೆಂದೇ ಸನ್ಮಾನ್ಯ ವಿಧಾನಸಭೆಯ ಸದಸ್ಯರು ಮತ್ತು ರೈತರನ್ನು ಒಳಗೊಂಡಂತೆ ಈಗಾಗಲೇ ಒಂದು ಬಾರಿ ಮೀಟಿಂಗ್ ಮಾಡಿದ್ದೇವೆ. ಈ ಒಂದು ಮೀಟಿಂಗ್‌ನಲ್ಲಿ ಉಭಯೋತರರು ಒಂದು ನಿರ್ಣಯಕ್ಕೆ ಬಂದಿದ್ದೇವೆ. ಆ ಒಂದು ತೀರ್ಮಾನವನ್ನು ಕೂಡ ತಮ್ಮ ಮುಂದೆ ಇಟ್ಟಿದ್ದೇನೆ. ಚೋಳನಾಯಕನ ಹಳ್ಳಿಯ ಸರ್ವೆ ನಂಬರ್ ೫೬ರಲ್ಲಿ ಪುನರ್‌ವಸತಿಗಾಗಿ ಲೇಔಟ್‌ನ್ನು ಮಾಡಲಿಕ್ಕೆ ಹೋದಾಗ ಜಮೀನ್ದಾರರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಅದನ್ನು ವೆಕೇಟ್ ಮಾಡಿಸತಕ್ಕ ಪ್ರಯತ್ನ ನಮ್ಮ ಲೀಗಲ್ ಡಿಪಾರ್ಟ್‌ಮೆಂಟ್ ನಿಂದ ಬಹಳ ತೀವ್ರವಾಗಿ ನಡೆಯುತ್ತಿದೆ. ಅದು ಆದ ಕೂಡಲೇ ಶೀಘ್ರದಲ್ಲಿಯೇ ಈ ಕೆಲಸವನ್ನ ಮಾಡಿಕೊಡುತ್ತೇವೆ ಎಂಬ ಮಾತನ್ನು ಅವರಿಗೆ ತಿಳಿಯಪಡಿಸುತ್ತೇನೆ. ಮತ್ತೊಂದು ವಿಚಾರ, ಭೂ ಪರಿಹಾರ ಕೊಡುವ ಬಗ್ಗೆ, ಒಂದು ಗ್ರಾಮದಲ್ಲಿ ಒಂದು ರೀತಿ ಮತ್ತೊಂದು ಗ್ರಾಮದಲ್ಲಿ ಇನ್ನೊಂದು ಒಂದು ರೀತಿ ಪರಿಹಾರ ಕೊಟ್ಟಿದ್ದಾರೆ, ಇದರಿಂದ ಅನ್ಯಾಯ ಆಗಿದೆ ಎಂಬ ಮಾತು ಆ ಚರ್ಚೆಯ ವೇಳೆಯಲ್ಲಿ ಬಂತು. ಈಗಲೂ ಕೂಡ ಅದನ್ನು ಹೇಳಿದ್ದಾರೆ. ಅದನ್ನು ಸ್ಪರಿಪಡಿಸತಕ್ಕಂಥದ್ದಕ್ಕೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ. ಆ ರೇಟ್‌ನಲ್ಲಿ ಕೊಡತಕ್ಕಂಥದ್ದಕ್ಕೆ ಈಗಾಗಲೇ ಕ್ರಮ ಕೈಗೊಂಡಿದ್ದೇನೆ. ಮತ್ತು ಕೆಲವರಿಗೆ ಈಗಾಗಲೇ ಕೊಟ್ಟಿದ್ದೇನೆ ಎನ್ನತಕ್ಕ ವಿಷಯವನ್ನು ಹೇಳುತ್ತೇನೆ. ಈ ಪುನರ್ ವಸತಿ ಕಾರ್ಯಕ್ರಮ ಆಗುವವರೆಗೆ ಅವರಿಗೆ ಅಲ್ಲಿ ಷೆಡ್ ಹಾಕಿ ತಾತ್ಕಾಲಿಕವಾಗಿ ಅವರಿಗೆ ವಾಸಕ್ಕೆ ನಾವು ಅವಕಾಶ ಮಾಡಿ ಕೊಟ್ಟಿದ್ದೇವೆ. ಕೋರ್ಟಿನ ಆಜ್ಞೆ ತೆರವಾದ ಗಳಿಗೆಯಲ್ಲಿ ಆ ಪುನರ್ ವಸತಿ ಕಾಲೋನಿಯನ್ನು ಕಟ್ಟಿ ಅವರನ್ನು ಅಲ್ಲಿ ಹಾಕತಕ್ಕ ಪ್ರಯತ್ನವನ್ನು ಮಾಡುತ್ತೇವೆ ಎಂದು ತಮ್ಮ ಮೂಲಕ ತಿಳಿಯಪಡಿಸುತ್ತೇನೆ.

†ಶ್ರೀ ಕೆ.ಎಂ. ಲಿಂಗಪ್ಪ.—ಸನ್ಮಾನ್ಯ ಅಧ್ಯಕ್ಷರೇ, ೧೯೭೦ನೇ ಇಸವಿಯಲ್ಲಿ ಆಗಿನ ಮುಖ್ಯಮಂತ್ರಿಗಳಾಗಿದ್ದ ಶ್ರೀವೀರೇಂದ್ರ ಪಾಟೀಲರು ಈ ಒಂದು ಯೋಜನೆಗೆ ಆಸ್ತಿಭಾರ ಹಾಕಿದ್ದರು. ಅಂದಾಜು ಆಗ ಮೂರು ಕೋಟಿ ರೂಪಾಯಿ ಇದ್ದು, ಈಗ ೧೮ ಕೋಟಿ ರೂಪಾಯಿ ಆಗಿದೆ. ಇನ್ನೂ ಕಾರ್ಯ ಪೂರ್ಣ ಆಗಿಲ್ಲ ಏಕೆಂದರೆ ನಾನಾ ತೊಂದರೆಗಳಿವೆ. ಬಹುಶಃ ಇಲಾಖೆಯವರನ್ನು ಕೇಳಿದರೆ ಇನ್ನೂ ೧೮ ಕೋಟಿ ರೂಪಾಯಿ ಬೇಕು ಎಂದು ಹೇಳುತ್ತಿದ್ದಾರೆ. ಕಾಲ ಎಷ್ಟು ವಿಳಂಬ ಆಗುತ್ತದೆ, ಖರ್ಚು ಎಷ್ಟು ಹೆಚ್ಚು ಆಗುತ್ತಾ ಹೋಗುತ್ತದೆ. ಈ ವಿಳಂಬ ಆಗುತ್ತಾ ಇರುವುದಕ್ಕೆ ಬಹು ಮುಖ್ಯ ಕಾರಣ ಈ ಭೂ ಸ್ವಾಧೀನ ಕಾರ್ಯಕ್ರಮಗಳು ಮತ್ತು ಪುನರ್‌ವಸತಿ ಕಾರ್ಯಕ್ರಮಗಳು ಸರಿಯಾಗಿ ಮತ್ತು ಸಕಾಲದಲ್ಲಿ ನಡೆಯದೇ ಇರತಕ್ಕದ್ದು. ಮಾನ್ಯ ಸಚಿವರು ಚೋಳನಾಯಕನ ಹಳ್ಳಿ ಬಂದರ ಬಗ್ಗೆ ಮಾತ್ರ ಹೇಳಿದರು. ಆದರೆ ಅವರು ಭೂ ಮಾಲೀಕರೆಲ್ಲ.....

(ಶ್ರೀ ಬಿ. ಸ್ವಾಮಿರಾವ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀರಂಗಪಟ್ಟಣದ ದೇವಸ್ಥಾನದ ಭೂಮಿಗೆ ತಾನು ಗೇಣಿದಾರ ಎನ್ನತಕ್ಕ ಬಂದು ಕೃತಕವಾದಂತ ಒಂದು ಬೇಡಿಕೆಯನ್ನು ಮುಂದಿಟ್ಟು ಹೇಗೋ ಏನೋ ಮಾಡಿ ಉಚ್ಚ ನ್ಯಾಯಾಲಯದಿಂದ ಒಂದ ತಡೆ ಆಜ್ಞೆಯನ್ನು ತೆಗೆದುಕೊಂಡಿದ್ದಾರೆ. ಇದನ್ನು ನ್ಯಾಯಾಲಯದಲ್ಲಿ ಮನವರಿಕೆ ಮಾಡಿ ತೆರವು ಮಾಡಿಸುವುದು ಎಷ್ಟು ಕಷ್ಟ ಆಗಲಿದೆಯು ಎನ್ನುವುದು ನನ್ನ ಅಭಿಪ್ರಾಯ. ಇಲ್ಲಿ ಮೂರು ಪುನರ್ ವಸತಿ ಪ್ರಾಂಗಣಗಳು ಏನಿವೆ, ಅಲ್ಲಿ ತಾವು ಮನೆಗಳನ್ನು ಕಟ್ಟಿಸಿಕೊಡತಕ್ಕ ವ್ಯವಸ್ಥೆ ಮಾಡಿ. ಗಂಗಾಕಲ್ಯಾಣ ಯೋಜನೆ ಅಡಿಯಲ್ಲಿ ಅಥವಾ ಇನ್ನಾವುದೇ ವಿಶೇಷವಾದ ಸರ್ಕಾರದ ಯೋಜನೆಯಿಂದ ಸಾಮೂಹಿಕ ವಾದ ಸೌಲಭ್ಯಗಳನ್ನು ತೋಡಿಸಿ ಅವರಿಗೆ ಒಂದು ನೆಮ್ಮದಿಯಾದ ಜೀವನ ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕು. ಇದಕ್ಕೆ ಕಾರಣ ಇಷ್ಟೇ. ಅರ್ಕಾವತಿ ಹೊಳೆಯ ಅಕ್ಕಪಕ್ಕದಲ್ಲಿ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸಿರುತ್ತದೆ.

ಬಹಳ ಸುಂದರವಾದ ತೋಟಗಳನ್ನು ಮಾಡಿಕೊಂಡು ನೆಮ್ಮದಿಯಾಗಿ ಜೀವನ ಮಾಡುತ್ತಿದ್ದ ರೈತಾಪಿ ಜನ ಇವರಾಗಿದ್ದರು. ಅವರನ್ನು ಹೊರಗಡೆ ಹಾಕಿದಾಗ ಅವರ ಸ್ಥಿತಿ ಏನು ಆಗಿದೆ ಎಂದರೆ, ನೀರಿನಿಂದ ಎತ್ತಿ ಬಯಲಿಗೆ ಹಾಕಿದ ಮೀನಿನ ಸ್ಥಿತಿಯಂತೆ ಆಗಿದೆ. ನೀರು ಸಿಕ್ಕಿ ಜೀವನ ಮಾಡುವ ಹಾಗೆ ಇಲ್ಲ ಬಯಲಿನಲ್ಲಿ ಬಿಸಿಲಿನ ತಾಪ ತಡೆಯುವಂತಿಲ್ಲ. ಇಲ್ಲಿ ಹಾಕಿಕೊಟ್ಟಿರತಕ್ಕ ಜಿಂಗ್‌ಶೀಟಿನ ತಾತ್ಕಾಲಿಕ ಶೆಡ್ ಸಾಮಾನ್ಯವಾಗಿ ಯಾವುದೇ ಮನುಷ್ಯ ವಾಸಮಾಡುವುದಕ್ಕೆ ಯೋಗ್ಯವಾಗಿ ಇಲ್ಲದೇ ಇರತಕ್ಕ ಪರಿಸ್ಥಿತಿ ಆಲ್ಲಿದೆ. ಆರು ತಿಂಗಳು ಅಥವಾ ಒಂದು ವರ್ಷ ಎಂದರೆ ಯಾವಾದರೂ ತಡೆದುಕೊಳ್ಳ ಬಹುದು. ಆದರೆ ವರ್ಷಾನುಗಟ್ಟಲೆ ಅಂದರೆ ಸುಮಾರು ೧೦–೧೫ ವರ್ಷಗಳ ಕಾಲ ಜಿಂಕ್‌ಶೀಟ್ ಶೆಡ್‌ಗಳಲ್ಲಿ ವಾಸ ಮಾಡಬೇಕು ಎಂದರೆ, ತುಂಬಾ ಅಮಾನುಷವಾದ ರೀತಿಯಲ್ಲಿ ಜೀವನ ಮಾಡ ಬೇಕಾಗುತ್ತದೆ. ಸನ್ಮಾನ್ಯ ಸಚಿವರು ಇಲ್ಲಿ ಈಗ ಹೇಳಿರತಕ್ಕದ್ದು ವಿಷಯ ಸತ್ಯ. ಆದರೆ ಆಗಿರತಕ್ಕ ತೀರ್ಮಾನಗಳು ಜಾರಿಗೆ ಬರಬೇಕಾಗಿದೆ. ಅವು ಅನುಷ್ಠಾನಕ್ಕೆ ಬರಬೇಕಾದರೆ ಈ ನಮ್ಮ ಸರ್ಕಾರಿ ಯಂತ್ರದಲ್ಲಿ ಏಕೋ ಸಾಕಷ್ಟು ವಿಳಂಬ ಕಾಣುತ್ತಿದೆ. ದಯವಿಟ್ಟು ತಮ್ಮ ಮೂಲಕ ಪ್ರಾರ್ಥನೆ ಮಾಡುತ್ತೇನೆ, ಈ ಬಗ್ಗೆ ಆದಷ್ಟು ಬೇಗ ತಾವು ಪರಿಹಾರ ಒದಗಿಸಿಕೊಟ್ಟು, ಅವರಿಗೆ ಪುನರ್‌ವಸತಿ ಕಲ್ಪಿಸಿಕೊಟ್ಟು ನೆಮ್ಮದಿಯಾಗಿ ಜೀವನ ಮಾಡುವುದಕ್ಕೆ ಎಷ್ಟು ಬೇಗ ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳುತ್ತೇನೆ. ಈ ಯೋಜನೆ ಕಾರ್ಯವೂ ಸಹ ಅಷ್ಟೇ ತೀವ್ರ ಗತಿಯಲ್ಲಿ ಆಗಬೇಕು. ಈ ಯೋಜನೆ ಈ ವರ್ಷ ಅಥವಾ ಮುಂದಿನ ವರ್ಷದ ಅಡಿ ಭಾಗದಲ್ಲಿಯಾದರೂ ಪೂರ್ಣಗೊಂಡರೆ ಇದಕ್ಕೆ ಇಲ್ಲಿಯ ವರೆಗೆ ಮಾಡಿರತಕ್ಕ ವೆಚ್ಚ ಸಾರ್ಥಕ ಆಗುವುದಕ್ಕೆ ಅವಕಾಶ ಆಗುತ್ತದೆ ಎಂದು ಹೇಳಿ, ದಯವಿಟ್ಟು ಸಚಿವರು ಈ ಬಗ್ಗೆ ತೀವ್ರ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಶಾಸಕರಿಬ್ಬರೂ ಬಹಳ ಪ್ರಾಮುಖ್ಯವಾದಂತಹ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಪುನರ್‌ವಸತಿ ಕಾರ್ಯಕ್ರಮದಲ್ಲಿ ನಾವು ಅವರಿಗೆ ಸೈಟ್‌ಗಳನ್ನು ಮತ್ತು ಅಲ್ಲಿ ಬೇಕಾದಂತಹ ರಸ್ತೆ ಮತ್ತು ಸಣ್ಣ ಪುಟ್ಟ ಚರಂಡಿಗಳನ್ನು ಮಾಡಿ ಮನೆ ಕಟ್ಟಿಕೊಳ್ಳತಕ್ಕಂಥದ್ದಕ್ಕೆ ಒಂದು ಪರಿಸರವನ್ನು ಸೃಷ್ಟಿ ಮಾಡಿಕೊಡಬಹುದೇ ವಿನಹ ಮನೆಗಳನ್ನು ಕಟ್ಟಿಕೊಡತಕ್ಕ ನಿಯಮ ನಮ್ಮ ಪುನರ್‌ವಸತಿ ಕಾರ್ಯಕ್ರಮದಲ್ಲಿ ಇಲ್ಲ. ಮೇಲಾಗಿ ಆಲ್ಲಿಗೆ ಬೇಕಾದಂಥ ಪಾಠಶಾಲೆಗಳು, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಸಮುದಾಯ ಭವನವನ್ನು ಕಟ್ಟಲಿಕ್ಕೆ ಮಾತ್ರ ಅವಕಾಶ ಇದೆ. ಈ ಕೆಲಸವನ್ನು ಮಾಡತಕ್ಕಂಥದ್ದಕ್ಕೆ, ಅವರು ಹೇಳಿದ ಹಾಗೆ ದೇವಸ್ಥಾನದ ಆಡಳಿತ ಕರ್ತರಿಂದ ಸ್ವಲ್ಪ ಅಡ್ಡಿ ಆಗಿದೆ. ನಾನು ಕೂಡ ಅದನ್ನು ಒಪ್ಪಿಕೊಂಡಿದ್ದೇನೆ. ಕೋರ್ಟಿನಲ್ಲಿರುವ ತಡೆಯಾಜ್ಞೆ ತೆರವು ಆದ ತಕ್ಷಣದಲ್ಲಿ ನಾವು ಕೆಲಸ ಮಾಡಿಕೊಡುತ್ತೇವೆ. ಆದರೆ ಸನ್ಮಾನ್ಯ ಸದಸ್ಯರಿಬ್ಬರ ಪ್ರಮುಖ ಪ್ರಶ್ನೆ ಏನು ಅಂದರೆ, ಅವರು ತೆಗೆದುಕೊಂಡಿರತಕ್ಕ ಎರಡು ಸಾವಿರ ರೂಪಾಯಿಗಳ ಹಣವನ್ನು ೧೮ ವರ್ಷಗಳ ಹಿಂದೆಯೇ ಖರ್ಚು ಮಾಡಿಕೊಂಡು ಬಿಟ್ಟಿದ್ದಾರೆ, ಈಗ ಅವರಿಗೆ ಜಮೀನು ಕೊಟ್ಟಿರತಕ್ಕದ್ದು ಖುಷ್ಕಿ ಭೂಮಿ ಆಗಿದ್ದು, ಅದರಲ್ಲಿ ಜೀವನ ಮಾಡ ತಕ್ಕಂಥಾದ್ದಕ್ಕೆ ಅಥವಾ ಬೇಸಾಯವನ್ನು ಮಾಡತಕ್ಕಂಥದ್ದಕ್ಕೆ ಬಹಳ ಕಷ್ಟ ಆಗಿದೆ. ಅವರು ಬಹಳ ನಿರ್ಗತಿಕರಾಗಿದ್ದಾರೆ. ಜಲಾಶಯಗಳನ್ನು ಕಟ್ಟತಕ್ಕಂಥಾದ್ದಕ್ಕೆ ಭೂಮಿಯನ್ನು ಕೊಟ್ಟವರನ್ನು ನಿರ್ಗತಿಕರನಾಗಿ ಮಾಡಿದ ಒಂದು ಕೃತ್ಯ ಸರ್ಕಾರದಿಂದ ಆಗಿದೆ ಎನ್ನತಕ್ಕ ಭಾವನೆ ಅವರ ಮನಸ್ಸಿನಲ್ಲಿದೆ. ನಾವು ಜಲಾಶಯವನ್ನು ಕಟ್ಟುವಾಗ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಅವರಿಗೆ ಕೊಡಬೇಕಾದ ಭೂ ಪರಿಹಾರ ಕೊಟ್ಟಿದ್ದೇವೆ. ಪುನರ್ ವಸತಿ ಕಾರ್ಯಕ್ರಮಗಳನ್ನು ನಾವು ಮಾಡಿ ಕೊಡುತ್ತೇವೆ. ಆದರೆ ಅವರು ಹೇಳತಕ್ಕದ್ದನ್ನು ನಾವು ಗಮನದಲ್ಲಿಟ್ಟುಕೊಂಡು ಮಾನವೀಯತೆ ದೃಷ್ಟಿಯಿಂದ ಪರಿಶೀಲನೆ ಮಾಡಬೇಕು ಎಂದು ಹೇಳುವಾಗ, ಅವರಿಗೆ ಗಂಗಾ ಕಲ್ಯಾಣ ಯೋಜನೆಯಲ್ಲಿ, ಮನೆ ಕಟ್ಟಿಕೊಡತಕ್ಕದ್ದಕ್ಕೆ ಜಲಾಶಯಗಳ ನಿಯಮದಲ್ಲಿಲ್ಲ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯಿಂದ ಈ ಕೆಲಸವನ್ನು ಮಾಡಿಸಿಕೊಡಬೇಕಾಗುತ್ತದೆ. ಈಗಾಗಲೇ ನಾನು ಸಂಬಂಧಪಟ್ಟ ಖಾತೆಯ ಮಂತ್ರಿಗಳ ಜೊತೆ ಪ್ರಸ್ತಾಪ ಮಾಡಿದ್ದೇನೆ. ಆದರೆ ಅವರು ಮನೆ ಕಟ್ಟ ಕೊಳ್ಳುವಂತಹ ಪರಿಸ್ಥಿತಿಯಲ್ಲಿಲ್ಲ. ಅವರು ಕೊಟ್ಟ ದುಡ್ಡನ್ನು ಖರ್ಚು ಮಾಡಿಕೊಂಡಿದ್ದಾರೆ. ಈಗ ಅವರಿಗೆ ಗ್ರೂಪ್ ಹೌಸಿಂಗ್ ಸ್ಕೀಮ್‌ನಲ್ಲಿ ಮನೆಯನ್ನು ಕಟ್ಟಿಸಿಕೊಡುವುದಕ್ಕೂ ಸಹ ಗ್ರಾಮೀಣಾಭಿವೃದ್ಧಿ ಸಚಿವರ ಹತ್ತಿರ ಮಾತನಾಡಿದ್ದೇನೆ. ಆ ಕಡೆಯಿಂದ ಮಾಡತಕ್ಕಂಥ ಪ್ರಯತ್ನ ಏನು ನಾನು ಮಾಡುತ್ತೇನೆಂದು ತಮ್ಮ ಮೂಲಕ ಅವರಿಗೆ ತಿಳಿಯಬಯಸುತ್ತೇನೆ.

ಶ್ರೀ ಸಿ. ಎಂ. ಲಿಂಗಪ್ಪ.—ಮಾನ್ಯ ಅಧ್ಯಕ್ಷರೇ, ಜಮೀನು ಕಳೆದುಕೊಂಡವರಿಗೆ ಪರಿಹಾರವನ್ನು ಕೊಡುವಾಗ ಒಂದು ಹಳ್ಳಿಯಲ್ಲಿ ಎಕರೆಗೆ ಎರಡು ಸಾವಿರದಂತೆ ಮತ್ತೊಂದು ಗ್ರಾಮಕ್ಕೆ ಎಕರೆಗೆ

ಳಿ ಸಾವಿರ ರೂಪಾಯಿಗಳಂತೆ ಕೊಟ್ಟಿದ್ದಾರೆ. ಒಂದೇ ಭಾಗದಲ್ಲಿರತಕ್ಕ ಜಮೀನಿಗೆ ಎರಡು ರೀತಿಯ ಪರಿಹಾರ ಬರುವುದಿಲ್ಲ, ಅದನ್ನು ಸರಿಪಡಿಸಿ ಎಂದು ನಾನು ಹೇಳಿದ್ದೇನೆ. ಜೊತೆಗೆ ಮನೆ ಕಟ್ಟಿ ಕೊಡುವ ಬಗ್ಗೆ ಹೇಳಬೇಕಾದರೆ, ಮಾಗಡಿಯಲ್ಲಿ ನಾನು ಸಹ ಮುನಿಸಿಪಲ್ ಅಧ್ಯಕ್ಷನಾಗಿದ್ದೆ. ಆ ಚಾಗದಲ್ಲಿ ಬಡವರಿಗೆ ಮನೆ ಕಟ್ಟಿಕೊಡುವಂತಹ ಕಾರ್ಯಕ್ರಮಗಳಿವೆ. ಇಲ್ಲಿ ಇಲಾಖೆ ಬೇರೆ ಇರಬಹುದು. ಆದರೂ ಸಹ ಮತ್ತೊಂದು ಇಲಾಖೆಯ ಜೊತೆಗೆ ಸಹಕರಿಸಿ ಅವರನ್ನು ಕೇಳಿಕೊಂಡು ಈ ಜಮೀನನ್ನು ತೆಗೆದುಕೊಂಡು ಜನರಿಗೆ ಮನೆ ಕಟ್ಟಿಸಿಕೊಡಲು ಸಹಾಯ ಮಾಡಿಕೊಡಬೇಕಾದುದು ಇಲಾಖೆಯ ಕರ್ತವ್ಯ ಅಲ್ಲದಿದ್ದರೂ ಸಹ ಇದು ಸರ್ಕಾರದ ಕರ್ತವ್ಯ. ಆದ್ದರಿಂದ ಸರ್ಕಾರದವರು ಇದನ್ನು ಮಾಡಿಕೊಡಬೇಕೆಂದು ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಭೂ ಪರಿಹಾರ ಕೊಡುವುದರಲ್ಲಿ ಆಗಿರತಕ್ಕ ವ್ಯತ್ಯಾಸವನ್ನು ಈಗಾಗಲೇ ಸರಿಪಡಿಸಿದ್ದೇವೆ. ಎರಡು ಸಾವಿರ ಒಂದು ಊರಿಗೆ ಕೊಡತಕ್ಕಂಥದ್ದು ಮತ್ತೊಂದು ಊರಿಗೆ ನಾಲ್ಕು ಸಾವಿರ ಕೊಡತಕ್ಕದ್ದು ಏನು ಇದೆ, ಅದು ಆಗಬಾರದು ಎಂದು ಎಲ್ಲರಿಗೂ ನಾಲ್ಕು ಸಾವಿರ ಕೊಡಬೇಕು ಎಂಬ ನಿರ್ಣಯವನ್ನು ಅವರ ಸಮ್ಮುಖದಲ್ಲಿ ನಡೆದಂತಹ ಮೀಟಿಂಗ್‌ನಲ್ಲಿ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಅದರಂತೆ ಈಗಾಗಲೇ ಕೆಲವರಿಗೆ ಕೊಟ್ಟಿದ್ದೇವೆ, ಈ ಕಾರ್ಯ ಪ್ರಗತಿಯಲ್ಲಿದೆ ಎನ್ನುವ ವಿಚಾರವನ್ನು ಹೇಳುತ್ತೇನೆ. ಮತ್ತೊಂದು ಮಾತು ಹೇಳಿದ್ದಾರೆ. ಬೇರೆ ಇಲಾಖೆ ಆದರೂ ಕೂಡ ಇದು ಸರ್ಕಾರದ್ದೇ ಆದ್ದರಿಂದ ಅದನ್ನೂ ಕೂಡ ಖತಕ್ಕೆ ಮಾಡಿಸಬಾರದು ಎಂದು ಹೇಳಿದ್ದಾರೆ. ಆ ದಿಸೆಯಲ್ಲಿ ನಾನು ಪ್ರಯತ್ನ ಮಾಡುತ್ತೇನೆ.

(೨) ೧೯೯೦–೯೧ನೇ ಸಾಲಿಗೆ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ನೀಡಬಾರದೆಂದು ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಿಗೆ ಕುವೆಂಪು ವಿಶ್ವವಿದ್ಯಾನಿಲಯದ ನಿರ್ದೇಶನ

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ೧೯೯೦–೯೧ನೇ ಸಾಲಿಗೆ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ನೀಡಬಾರದೆಂದು ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಿಗೆ ಕುವೆಂಪು ವಿಶ್ವವಿದ್ಯಾನಿಲಯದ ನಿರ್ದೇಶನದ ಬಗ್ಗೆ ಶಿಕ್ಷಣ, ಯುವಜನ ಸೇವೆ, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಕೆ. ಹೆಚ್. ರಂಗನಾಥ್ (ಮಾನ್ಯ ಶಿಕ್ಷಣ, ಯುವಜನ ಸೇವೆ, ಕ್ರೀಡೆಗಳು ಕನ್ನಡ ಮತ್ತು ಸಂಸ್ಕೃತಿ ಸಚಿವರು).—ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ಈ ಹೇಳಿಕೆಯನ್ನು ಮಾಡುತ್ತಿದ್ದೇನೆ.

೧೯೯೦–೯೧ನೇ ಸಾಲಿಗೆ ಪ್ರಥಮ ವರ್ಷದ ಪದವಿ ತರಗತಿಗಳಿಗೆ ಪ್ರವೇಶ ನೀಡಬಾರದೆಂದು ಮೂಡಿಗೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಿಗೆ ಕುವೆಂಪು ವಿಶ್ವವಿದ್ಯಾನಿಲಯವು ನಿರ್ದೇಶನ ನೀಡಿರುವ ಬಗ್ಗೆ ಸರ್ಕಾರಕ್ಕೆ ಅಧಿಕೃತವಾಗಿ ಸದರಿ ವಿಶ್ವವಿದ್ಯಾನಿಲಯದಿಂದಾಗಲೀ ಅಥವಾ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದಾಗಲೀ ಮಾಹಿತಿಗಳು ಬಂದಿರುವುದಿಲ್ಲ.

ಆದರೆ, ಈ ಬಗ್ಗೆ ದಿನಾಂಕ ೨೩ನೇ ಜೂನ್ ೧೯೯೦ ರಂದು ನಡೆದ ಕುವೆಂಪು ವಿಶ್ವವಿದ್ಯಾನಿಲಯದ ೬ನೆಯ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ, ಮೂಡಿಗೆರೆಯಲ್ಲಿರುವ ಪ್ರಥಮ ದರ್ಜೆ ಕಾಲೇಜಿಗೆ ಪ್ರಥಮ ಡಿಗ್ರಿ ತರಗತಿಗೆ ಸಂಯೋಜನೆ ನೀಡಬಾರದೆಂದು ಸಮಿತಿಯು ವರದಿ ಸಲ್ಲಿಸಿರುವ ಪ್ರಯುಕ್ತ, ಸದರಿ ಕಾಲೇಜಿಗೆ ಪತ್ರ ಬರೆದು ವಿಶ್ವವಿದ್ಯಾನಿಲಯದ ಆದೇಶದಂತೆ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬಾರದೆಂದು, ಒಂದು ವೇಳೆ ಈಗಾಗಲೇ ಪ್ರವೇಶ ನೀಡಿ ಸೇರಿಸಿಕೊಂಡಿದ್ದಲ್ಲಿ ವಿದ್ಯಾರ್ಥಿಗಳನ್ನು ಬೇರೆ ಬೇರೆ ಕಾಲೇಜುಗಳಿಗೆ ಕಳುಹಿಸಿಕೊಡಬೇಕೆಂದು ಸೂಚಿಸಿ ಪತ್ರ ಬರೆಯಬೇಕೆಂದು ಸಭೆಯು ಅಭಿಪ್ರಾಯ ಪಡೆಯಿತೆಂದು ತಿಳಿದು ಬಂದಿದೆ.

ಈ ವಿಷಯದ ಬಗ್ಗೆ ಪೂರ್ಣ ವರದಿಯನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯ ಹಾಗೂ ಕಾಲೇಜಿನಿಂದ ತರಿಸಿಕೊಂಡು ನಿಯಮಾನುಸಾರ ಪರಿಶೀಲಿಸಲಾಗುವುದು.

ಶ್ರೀ ಡಿ. ಬಿ. ಚಂದ್ರೇಗೌಡ.—ಮಾನ್ಯ ಅಧ್ಯಕ್ಷರೇ, ಆ ಪತ್ರದ ನಕಲು ನನ್ನ ಹತ್ತಿರ ಇದೆ. ನಾನು ಅದನ್ನು ಉಲ್ಲೇಖ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ೧೯೯೦–೯೧ನೇ ಸಾಲಿಗೆ ಪ್ರಥಮ ಪದವಿ ತರಗತಿ ಪ್ರವೇಶ ನಿರಾಕರಿಸುವ ಬಗ್ಗೆ "ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿ